# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1052(1288) |
| ಸದಸ್ಯರ ಹೆಸರು | : | ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 17.12.2025 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ತುಮಕೂರು ಜಿಲ್ಲೆ ಶಿರಾ ತಾಲ್ಲೂಕು ಚಿಕ್ಕನಹಳ್ಳಿ ದಾನಿ ಶ್ರೀ ಉಗ್ರೇಗೌಡರು ಹಳೆ ಸರ್ವೆ ನಂ.190 ಹೊಸ ಸರ್ವೆ ನಂ.202 ರಲ್ಲಿ 5-14 ಎಕರೆ/ಗುಂಟೆ ಮತ್ತು ಹಳೆ ಸರ್ವೆ ನಂ.187/1 ಮತ್ತು 2 ಹೊಸ ಸರ್ವೆ ನಂ.199/4 ಮತ್ತು 5ರ 2-00 ಎಕರೆ ವಿಸ್ತೀರ್ಣದ ಜಮೀನುಗಳನ್ನು ಮಹಾರಾಜರ ಸರ್ಕಾರದ ಆದೇಶ ಸಂಖ್ಯೆ:ಆರ್ 4769-70/361-07-1910 ರಂತೆ ಧರ್ಮಛತ್ರ ಮತ್ತು ಪಾಠಶಾಲೆ ಕಟ್ಟಲು ಈ ಜಮೀನುಗಳನ್ನು ಭೂ ಪರಿವರ್ತನೆಗೊಳಿಸಿ ಕಂದಾಯ ವಜಾಗೊಳಿಸಿ ಜಿಲ್ಲಾಧಿಕಾರಿಗಳ ಸಂರಕ್ಷಣೆಯಲ್ಲಿ ಸರ್ಕಾರ ವಹಿಸಿಕೊಂಡಿರುವುದು ನಿಜವೇ; | ಹೌದು. ಶಿರಾ ತಾಲ್ಲೂಕು ಕಳ್ಳಂಬೆಳ್ಳ ಹೋಬಳಿ ಚಿಕ್ಕನಹಳ್ಳಿ ಗ್ರಾಮದ ಹೊಸ ಸ.ನಂ.202ರಲ್ಲಿ 5-14 ಎಕರೆ/ಗುಂ ಹಾಗೂ ಹೊಸ ಸ.ನಂ.199/4 ಮತ್ತು ಸ.ನಂ.199/5 ರಲ್ಲಿ 2-00 ಎಕರೆ ಜಮೀನುಗಳನ್ನು ಮಹಾರಾಜರ ಸರ್ಕಾರದ ಆದೇಶ ಸಂಖ್ಯೆ:ಆರ್ 4769-70/361-07-1910 ರಂತೆ ಧರ್ಮಛತ್ರ ಮತ್ತು ಪಾಠಶಾಲೆ ಕಟ್ಟಲು ಈ ಜಮೀನುಗಳನ್ನು ಭೂ ಪರಿವರ್ತನೆಗೊಳಿಸಿ ಜಿಲ್ಲಾಧಿಕಾರಿಗಳ ಸಂರಕ್ಷಣೆಯಲ್ಲಿ ಸರ್ಕಾರ ವಹಿಸಿಕೊಂಡಿರುವುದು ದಾಖಲೆಗಳಿಂದ ಕಂಡುಬಂದಿರುತ್ತದೆ.<br><br>ಪ್ರಶ್ನಿತ ಹೊಸ ಸ.ನಂ.202 ಹಾಗೂ ಹೊಸ ಸ.ನಂ.199/4 ಮತ್ತು 199/5ರಲ್ಲಿ ಸರ್ಕಾರಿ ಶಾಲೆಯ ಕಟ್ಟಡಗಳು ಸರ್ಕಾರದ ವಶದಲ್ಲಿದ್ದರೂ, ಹಾಲಿ ಪಹಣಿಯಂತೆ ಖಾತೆದಾರರ ಹೆಸರಿಗೆ ಪಹಣಿಯು ಚಾಲ್ತಿಯಲ್ಲಿರುತ್ತದೆ. |
| ಆ) | ಜಿಲ್ಲಾಧಿಕಾರಿಗಳ ನ್ಯಾಯಾಲಯ ಪ್ರಕರಣ ಆರ್ ಪಿ 97/15 ರಂತೆ ದಾನದ ಜಮೀನುಗಳ ಒತ್ತುವರಿಯನ್ನು ತೆರವುಗೊಳಿಸುವಂತೆ ಮೇಲ್ಮನವಿ ಸಲ್ಲಿಸಿದ ಮೇರೆಗೆ ಮಾನ್ಯ ಜಿಲ್ಲಾಧಿಕಾರಿಗಳು ಸ್ಥಳ ತನಿಖೆ ಮಾಡದೆ ವಿಚಾರಣೆ ನಡೆಸದೆ ಶಾಲೆಯ ಹೆಸರಿಗೆ ಕೇವಲ 0-10 ಗುಂಟೆ ಮಾತ್ರ ವಿಸ್ತೀರ್ಣ ಎಂದು ತೀರ್ಪು ನೀಡಿದ ಪರಿಣಾಮ, ಶಾಲೆಯ ಕಟ್ಟಡಗಳು ಸೇರಿ ಶಾಲೆಗೆ ಬರುವ ದಾರಿಯೇ ಇಲ್ಲದೆ ಶಾಲೆಯನ್ನೇ ಮುಚ್ಚುವ ಸ್ಥಿತಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದರ ಪರಿಹಾರಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ರಿಜಿಸ್ಟರ್ ನಂ: 1/1912-13 ದಿನಾಂಕ:06.08.1912 ರಲ್ಲಿ ಉಗ್ರೇಗೌಡ ಬಿನ್ ನರಸೇಗೌಡ ರವರು ಸ್ವತ್ತುಗಳ ಸಂಬಂಧ ಅವರ ದತ್ತು ಮಗ ಅಣ್ಣಯ್ಯ ರವರಿಗೆ ಮರಣ ಶಾಸನ ಮಾಡಿರುತ್ತಾರೆ. ದಿನಾಂಕ:01.07.1951 ರಲ್ಲಿ ಶಂಕರಪ್ಪ ಬಿನ್ ಅಣ್ಣಯ್ಯ ರವರು ಮಾನ್ಯ ಮುನ್ಸಿಫ್ ನ್ಯಾಯಾಲಯದಲ್ಲಿ ಸ್ವತ್ತುಗಳ ಸಂಬಂಧ ರಿಲೀಸ್ ಡೀಡ್ ಮಾಡಿಕೊಟ್ಟಿರುವುದು ಕಂಡುಬಂದಿದೆ. ರಿಜಿಸ್ಟರ್ ನಂ:667/1989-90 ದಿನಾಂಕ:10.08.1989 ರಂತೆ ಶಂಕರಪ್ಪ ರವರ ಮಕ್ಕಳು ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದು, ಅದರಲ್ಲಿ "ಚಿಕ್ಕನಹಳ್ಳಿ ರಿ.ಸ.ನಂ:202 ಖುಷಿ ನಾವು ಹೈಸ್ಕೂಲಿಗೆ ದಾನವಾಗಿ ಕೊಟ್ಟಿರುವ 0-10 ಗುಂಟೆ ಪ್ರದೇಶ ಸೇರಿ ಒಟ್ಟು ವಿಸ್ತೀರ್ಣ 5-10 ಎ.ಗು" ಎಂದು ನಮೂದಿಸಿದೆ. ಅದರಂತೆ ಖಾತೆ ಪಹಣಿ ಆಗಿರುವುದಿಲ್ಲ.<br><br>ಅನಂತರ ರಿಜಿಸ್ಟರ್ ನಂ:1630/2001-02 |

| | | |
|---|---|---|
| | | ದಿನಾಂಕ:14.08.2001 ರಂತೆ ಶಂಕರಪ್ಪ ರವರ ಮಕ್ಕಳು ಸ್ವತ್ತುಗಳನ್ನು ಮತ್ತೊಮ್ಮೆ ವಿಭಾಗ ಮಾಡಿಕೊಂಡಿದ್ದು ಅದರಲ್ಲಿ ಕೃಷ್ಣಪ್ಪ ರವರಿಗೆ 2-08 ಎ/ಗು ಪುಟ್ಟರಾಜು ರವರಿಗೆ 1-36 ಎಕರೆ/ಗುಂಟೆ ಮತ್ತು ಶಿವಣ್ಣ ರವರಿಗೆ 0-36 ಎ/ಗು ಶಾಲೆಗೆ ದಾನವಾಗಿ ಬಿಟ್ಟಿರುವ 0-10 ಗುಂಟೆ ಹೊರತುಪಡಿಸಿ ಉಳಿಕೆ 5-00 ಎಕರೆ ಗೆ ಎಂ.ಆರ್.5/2001-02 ರಂತೆ ಹಕ್ಕು ದಾಖಲೆ ಅಂಗೀಕಾರವಾಗಿದೆ. ಆನಂತರ ಎಂ.ಆರ್.ಹೆಚ್:6/2012-13ರಂತೆ ಪುಟ್ಟರಾಜು ಬಿನ್ ಶಂಕರಪ್ಪ ರವರ ಪೌತಿ ಸಬೂಬು 3ನೇ ಎದುರುದಾರರಿಗೆ 1-36 ಎ/ಗು ಖಾತೆಯಾಗಿದೆ. ತಹಶೀಲ್ದಾರ್, ಶಿರಾ ತಾಲ್ಲೂಕು ರವರು ಜಿಲ್ಲಾಧಿಕಾರಿಗಳ ನಿರ್ದೇಶನದ ಮೇರೆ ಸ್ಥಳ ತನಿಖೆ ನಡೆಸಿ "ಪ್ರಶ್ನಿತ ಸ್ವತ್ತಿನ ಮೂಲ ಟಿಪ್ಪಣಿಯಲ್ಲಿ * ಅಣ್ಣಯ್ಯ ಬಿನ್ ಉದ್ರೇಗೌಡ, ಶಂಕರಪ್ಪ ಬಿನ್ ಅಣ್ಣಯಪ್ಪ, ಶಂಕರಪ್ಪನಿಗೆ ಪೌತಿ ವಾರಸಿನಂತೆ ಬಂದಿರುತ್ತದೆ ಎಂದು ನಮೂದಿಸಲಾಗಿದೆ. ತದನಂತರದಲ್ಲಿ ನೋಂದಣಿ ಸಂಖ್ಯೆ 01/1912-13 ರಂತೆ ಉಗ್ರೇಗೌಡ ಬಿನ್ ನರಸೇಗೌಡ ಎಂಬುವವರಿಂದ ಮುನಿಲಿಂಗಯ್ಯನ ಮಗ ಅಣ್ಣಯ್ಯಪ್ಪ ಎಂಬುವವರಿಂದ ಸ ನಂ 190ರಲ್ಲಿ 5-19 ಎಕರೆ/ಗುಂಟೆ ವಿಲ್ ಆಗಿರುತ್ತದೆ. ನಂತರ ಆರ್.ಆರ್ ಸಂಖ್ಯೆ 1253 ರಂತೆ ಅಣ್ಣಯ್ಯಪ್ಪ ನವರಿಂದ ಶಂಕರಪ್ಪ ಬಿನ್ ಬಿ ಎಂ ಅಣ್ಣಯ್ಯಪ್ಪ ಎಂಬುವವರಿಗೆ ಸ.ನಂ 190 ರಿಂದ 202 ಎಂದು ದರುಸ್ತಿಯಾಗಿ 202 ರಲ್ಲಿ 5-10 ಎಕರೆ/ಗುಂಟೆ ಪೌತಿ ವಾರಸ್ಸು ಮೂಲಕ ಬಂದಿರುತ್ತದ. ಮೂಲ ಟಿಪ್ಪಣಿ ಪ್ರತಿಯಲ್ಲಿ ಸ.ನಂ 202 ಯಾವ ಸ.ನಂ ನಿಂದ ದುರಸ್ತಿಯಾಯಿತ್ತು ಎಂಬ ಬಗ್ಗೆ ಕಾಣಿಸಿರುವುದಿಲ್ಲ. ಶಂಕರಪ್ಪ ಬಿನ್ ಅಣ್ಣಯ್ಯಪ್ಪ ನವರಿಂದ ಎಂ.ಆರ್ 58/1993-94 ರಂತೆ ಕೃಷ್ಣಪ್ಪ, ಪುಟ್ಟರಾಜು, ಶಿವಣ್ಣ ಎಂಬದವರಿಗೆ ಹಕ್ಕು ಬಂದಿದೆ. ನಂತರದಲ್ಲಿ ಎಂಆರ್ 5/2001-02 ರಂತೆ ಸಿ.ಎಸ್ ಕೃಷ್ಣಪ್ಪ ನಿಗೆ 2-08, ಸಿ.ಎಸ್ ಪುಟ್ಟರಾಜು ರವರಿಗೆ 1-36. ಸಿ.ಎಸ್ ಶಿವಣ್ಣ ನವರಿಗೆ 0-36 ಗುಂಟೆ ಜುಮ್ಲಾ 5-00 ಎಕರೆ ವಿಭಾಗದಂತೆ ಬಂದಿರುತ್ತದೆ. ಮುಂದುವರೆದು ಹಳೆ ಸ.ನಂ 190, ಹೊಸ ನಂ 202 ರ ಆಗಿದ್ದು ಒಟ್ಟು 5-10 ಎಕರೆ/ಗುಂಟೆ ಜಮೀನು ಇರುತ್ತದೆ 1967-68 ರ RTC ಕಾಲಂ 9 ರಲ್ಲಿ ಅಣ್ಣಯ್ಯ ಬಿನ್ ಉಗ್ರೇಗೌಡ ಇವರಿಂದ ಅಣ್ಣಯ್ಯನ ಮಗ ಶಂಕರಪ್ಪ ಇವರಿಗೆ ಪೌವತಿ ವಾರಸು ಮೇರೆಗೆ ICR 127/1967-68,ರಲ್ಲಿ ಖಾತೆ ಬದಲಾವಣೆ ಆಗಿದ್ದು ಈ |

| | | |
|---|---|---|
| | | ಖಾತೆಯು 1993-94 ರವರೆಗೂ ಮುಂದುವರೆದಿರುತ್ತದೆ.<br><br>ನಂತರ ಎಂಆರ್:58/93-94 ರಂತೆ ಸಿ.ಎಸ್ ಕೃಷ್ಣಪ್ಪ 2-08 ಎಕರೆ/ಗುಂಟೆ, ಸಿ.ಎಸ್.ಪುಟ್ಟರಾಜು 1-36 ಎಕರೆ/ಗುಂಟೆ ಸಿ.ಎಸ್.ಶಿವಣ್ಣ 0-36 ಗುಂಟೆ ಎಂದು ನಮೂದಿಸಿದ್ದು ನಂತರ ಎಂ.ಆರ್:05/2001-02 ವಿಭಾಗ ಪತ್ರದಂತೆ ಇವರ ಹೆಸರಿಗೆ ಖಾತೆ ಮುಂದುವರಿದಿರುತ್ತದೆ. ಹಾಲಿ ಸಿ.ಎಸ್. ಪುಟ್ಟರಾಜು ಮೃತಪಟ್ಟಿರುವುದರಿಂದ ಅವರ ಪತ್ನಿ ಶ್ರೀಮತಿ ಲಲಿತಮ್ಮ ಇವರ ಹೆಸರಿಗೆ ಖಾತೆ ಇರುತ್ತದೆ.<br><br>RTC ಕಾಲಂ 3 ಮತ್ತು 9 ಕ್ಕೆ ವ್ಯತ್ಯಾಸವಿದ್ದು ಕಾರಣ ಉಪವಿಭಾಗಾಧಿಕಾರಿಗಳ ರವರ ಆದೇಶದಂತೆ RTC ಕಾಲಂ 9 ರಲ್ಲಿ ಎಸ್.ಕೆ.ವಿ ಡಿ.ಹೆಚ್.ಎಸ್ 0-10 ಗುಂಟೆ ಪಹಣಿಯಲ್ಲಿ ನಮೂದಿಸಲಾಗಿದೆ ಹಾಗೂ 0-33 ಗುಂಟೆ ರಾಷ್ಟ್ರೀಯ ಹೆದ್ದಾರಿಗೆ ಭೂ ಸ್ವಾಧೀನವಾಗಿರುತ್ತದೆ. |
| ಇ) | ಶಾಲೆಯ ಒತ್ತುವರಿಯನ್ನು ತೆರವುಗೊಳಿಸಿ ದಾನಿಗಳ ಆಶಯದಂತೆ ಶಾಲೆಯ ಆಸ್ತಿಯನ್ನು ಉಳಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು? | ಪ್ರಸ್ತಾಪಿತ ಪರಬಾರೆಯಾಗಿರುವ ಪ್ರದೇಶಕ್ಕೆ ಸಂಬಂಧಿಸಿದಂತೆ ಮೇಲ್ಕಂಡ ಸರ್ಕಾರಿ ಆದೇಶಗಳಂತೆ ಮತ್ತು ರಿಜಿಸ್ಟಾರ್ ವಿಲ್ ನಂತೆ ದಾಖಲೆಗಳನ್ನು ಪರಿಶೀಲಿಸಿ ಅಳತೆ ಕಾರ್ಯ ಕೈಗೊಂಡು ನಂತರ ಪರಬಾರೆಯಾಗಿರುವುದು ಕಂಡುಬಂದಲ್ಲಿ ಕಾನೂನಿನ್ವಯ ಒತ್ತುವರಿಯನ್ನು ತೆರವುಗೊಳಿಸಿ ದಾನಿಗಳ ಮೂಲ ಉದ್ದೇಶದಂತೆ ಸರ್ಕಾರಿ ಆಸ್ತಿಯನ್ನು ಸಂರಕ್ಷಿಸಲಾಗುವುದು. |

(ಕಡತ ಸಂಖ್ಯೆ:ಆರ್‌ಡಿ 152 ಎಲ್‌ಜಿಟಿ 2025)

(ಕೃಷ್ಣ ಬೈರೇಗೌಡ)
**ಕಂದಾಯ ಸಚಿವರು**